# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1060** |
| ಉತ್ತರಿಸಬೇಕಾದ ದಿನಾಂಕ | : | 22.12.2021 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಸತಿ ಇಲಾಖೆಯ ಹಲವು ವಸತಿ ಯೋಜನೆಗಳು ಅನುದಾನದ ಲಭ್ಯತೆಯಿಲ್ಲದೇ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವ ಮತ್ತು ಪ್ರಗತಿಯಲ್ಲಿ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳಿಗೆ ಇಂದಿರಾ ಮನೆ ಆ್ಯಪ್ ಮತ್ತು ವಿಜಿಲ್ ಆ್ಯಪ್ ಮುಖಾಂತರ ಜಿ.ಪಿ.ಎಸ್ ಮಾಡಲಾದ ಮನೆಗಳ ಭೌತಿಕ ಪ್ರಗತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿತ್ತು, ಪ್ರಸ್ತುತ ಫಲಾನುಭವಿಗಳಿಗೆ ಅನುಕೂಲವಾಗಲೆಂದು ಇಂದಿರಾ ಆ್ಯಪ್ ಮತ್ತು ವಿಜಿಲ್ ಆ್ಯಪ್ ಅನ್ನು ಒಗ್ಗೂಡಿಸಿ ಇಂದಿರಾ ವಿಜಿಲ್ ಆ್ಯಪ್ ಎಂಬ ಸರಳೀಕೃತ ತಂತ್ರಾಂಶವನ್ನು ಅಳವಡಿಸಿದ್ದು ಸದರಿ ಆ್ಯಪ್ ಮೂಲಕ ಜಿ.ಪಿ.ಎಸ್. ಆಧಾರಿತ ಪ್ರಗತಿ ದಾಖಲಿಸಿದ ಪ್ರತಿಯೊಬ್ಬ ಫಲಾನುಭವಿಯ ಖಾತೆಗೆ ವಿಳಂಬವಿಲ್ಲದಂತೆ ಸಹಾಯಧನ ಜಮೆಯಾಗುತ್ತಿದೆ. |
| (ಆ) | ಹಾಗಿದ್ದಲ್ಲಿ, ವಸತಿ ಯೋಜನೆಗಳಿಗೆ ಅನುದಾನ ಒದಗಿಸಿ ಯೋಜನೆಗಳು ತ್ವರಿತಗತಿಯಲ್ಲಿ ಅನುಷ್ಠಾನಗೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | |
| (ಇ) | ರಾಜೀವ ಗಾಂಧಿ ವಸತಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುವ ಒಟ್ಟು ವಸತಿ ಯೋಜನೆಗಳು ಯಾವುವು; | ಈ ಕೆಳಕಂಡ ಯೋಜನೆಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br><br><u>ರಾಜ್ಯ ಸರ್ಕಾರದ ಯೋಜನೆಗಳು</u> :-<br><br>• ಬಸವ ವಸತಿ ಯೋಜನೆ<br>• ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ)<br>• ವಾಜಪೇಯಿ ನಗರ ವಸತಿ ಯೋಜನೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | • ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ<br>• ದೇವರಾಜ ಅರಸು ವಸತಿ ಯೋಜನೆ (ಗ್ರಾಮೀಣ ಮತ್ತು ನಗರ)<br><br>**ಕೇಂದ್ರ ಪುರಸ್ಕೃತ ಯೋಜನೆಗಳು** :-<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಮತ್ತು ನಗರ).<br><br>**ನಿವೇಶನ ಯೋಜನೆಗಳು** :-<br>• ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>• ಮುಖ್ಯ ಮಂತ್ರಿಗಳ ನಗರ ನಿವೇಶನ ಯೋಜನೆ. |
| (ಈ) | ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ಒದಗಿಸಲಾಗಿತ್ತು; | ವಿವಿಧ ವಸತಿ ಮತ್ತು ನಿವೇಶನ ಯೋಜನೆಗಳಡಿ 2018-19 ರಿಂದ 2020-21ರವರೆಗೆ ರೂ.10,361.40 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ರೂ.9,739.03 ಕೋಟಿಗಳನ್ನು ವಿವಿಧ ವಸತಿ ಯೋಜನೆಗಳಡಿ, ರೂ.61.27 ಕೋಟಿಗಳನ್ನು ನಿವೇಶನ ಯೋಜನೆಗಳಡಿ ಹಾಗೂ ರೂ.11.94 ಕೋಟಿಗಳನ್ನು ಮೂಲಭೂತ ಸೌಕರ್ಯ ಯೋಜನೆಗಳಡಿ ಜಿಲ್ಲಾಧಿಕಾರಿಗಳಿಂದ ನೀಡಲಾದ ಉಪಯೋಗ ಪ್ರಮಾಣ ಪತ್ರದನ್ವಯ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಸಂಬಂಧ ಖರ್ಚು ಮಾಡಿದ್ದು, ಒಟ್ಟಾರೆ ರೂ.9,812.24 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಆರ್ಥಿಕ ವರ್ಷಾವಾರು ಮತ್ತು ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಉ)</td><td>ಬೆಳಗಾವಿ ಜಿಲ್ಲೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯಾವ ಯಾವ ಯೋಜನೆಗಳ ಎಷ್ಟೆಷ್ಟು ಮನೆಗಳ ಯೋಜನೆಗಳಿಗೆ ಗುರಿ ನಿಗದಿಪಡಿಸಲಾಗಿದೆ; ಅವುಗಳ ಪ್ರಗತಿ ಯಾವ ಹಂತದಲ್ಲಿದೆ? (ವಿವರ ನೀಡುವುದು)</td><td>2021-22ನೇ ಸಾಲಿಗೆ ವಿವಿಧ ವಸತಿ ಯೋಜನೆಗಳಡಿ 5 ಲಕ್ಷ ಹೊಸ ಮನೆಗಳ ಗುರಿಯನ್ನು ಸರ್ಕಾರದ ಆದೇಶ ಸಂಖ್ಯೆ : ವಇ 44 ಹೆಚ್‌ಎಹೆಚ್ 2021(ಭಾಗ-1), ದಿನಾಂಕ :16.12.2021ರಲ್ಲಿ ಈ ಕೆಳಕಂಡಂತೆ ನೀಡಲಾಗಿದೆ :-<br>
<table>
<tr><th>ಯೋಜನೆ</th><th>ಮನೆಗಳ ಗುರಿ</th></tr>
<tr><td colspan="2">ಗ್ರಾಮೀಣ</td></tr>
<tr><td>ಬಸವ ವಸತಿ ಯೋಜನೆ</td><td>350000</td></tr>
<tr><td>ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)</td><td>50000</td></tr>
<tr><td>ಒಟ್ಟು</td><td>400000</td></tr>
<tr><td colspan="2">ನಗರ</td></tr>
<tr><td>ವಾಜಪೇಯಿ ನಗರ ವಸತಿ ಯೋಜನೆ</td><td>50000</td></tr>
<tr><td>ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)</td><td>25000</td></tr>
<tr><td>ದೇವರಾಜ ಅರಸು ವಸತಿ ಯೋಜನೆ</td><td>25000</td></tr>
<tr><td>ಒಟ್ಟು</td><td>100000</td></tr>
<tr><td>ಒಟ್ಟಾರೆ (ಗ್ರಾಮೀಣ ಮತ್ತು ನಗರ ಸೇರಿದಂತೆ)</td><td>500000</td></tr>
</table>
<br>ಮೇಲೆ ತಿಳಿಸಿದಂತೆ 5 ಲಕ್ಷ ಹೊಸ ಮನೆಗಳ ಗುರಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯತ್ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಅರ್ಹ ಫಲಾನುಭವಿಗಳ ಆಯ್ಕೆಗೆ ಸೂಚನೆ ನೀಡಲಾಗಿದ್ದು, ಈ ಸಂಬಂಧ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td></tr>
</table>

(ಸಂಖ್ಯೆ : ವಇ 475 ಹೆಚ್‌ಎಎಂ 2021)

**(ವಿ. ಸೋಮಣ್ಣ)**

ವಸತಿ ಮತ್ತು ಮೂಲಸೌಲಭ್ಯ

ಅಭಿವೃದ್ಧಿ ಸಚಿವರು

ಅನುಬಂಧ -1

LCQ - 1060

## 2018-19ರಿಂದ 2020-21ರವರೆಗೆ ವಸತಿ ಮತ್ತು ನಿವೇಶನ ಯೋಜನೆಗಳಡಿ ಬಿಡುಗಡೆ ಮತ್ತು ಖರ್ಚು ಮಾಡಲಾದ ಅನುದಾನದ ವಿವರ

ರೂ.ಕೋಟಿಗಳಲ್ಲಿ

| ಕ್ರ. ಸಂ. | ಯೋಜನೆಗಳು | 2018-19 | | 2019-20 | | 2020-21 | | ಒಟ್ಟು | |
|---|---|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 1 | ಬಸವ ವಸತಿ ಯೋಜನೆ | 1654.00 | 1935.84 | 590.62 | 799.70 | 990.00 | 614.65 | 3234.62 | 3350.19 |
| 2 | ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ | 1339.82 | 1200.62 | 1113.07 | 753.83 | 950.00 | 693.80 | 3402.89 | 2648.25 |
| 3 | ದೇವರಾಜ್ ಅರಸು ವಸತಿ ಯೋಜನೆ | 50.00 | 95.89 | 51.95 | 44.36 | 37.00 | 44.70 | 138.95 | 184.95 |
| 4 | ವಾಜಪೇಯಿ ನಗರ ವಸತಿ ಯೋಜನೆ | 250.00 | 208.31 | 93.75 | 307.67 | 352.00 | 269.21 | 695.75 | 785.19 |
| 5 | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 360.76 | 660.79 | 309.60 | 158.62 | 0.00 | 95.53 | 670.36 | 914.94 |
| 6 | ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ | 1433.01 | 1089.97 | 413.11 | 325.07 | 266.23 | 325.69 | 2112.35 | 1740.73 |
| 7 | ರಾಜೀವ್ ಆವಾಸ್ ಯೋಜನೆ | 106.48 | 109.52 | 0.00 | 2.75 | 0.00 | 2.51 | 106.48 | 114.78 |
| **ವಸತಿ ಒಟ್ಟು** | | **5194.07** | **5300.94** | **2572.10** | **2392.00** | **2595.23** | **2046.09** | **10361.40** | **9739.03** |
| 8 | ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ | 0.00 | 6.89 | 0.00 | 6.26 | 0.00 | 3.35 | 0.00 | 16.50 |
| 9 | ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ | 0.00 | 35.15 | 0.00 | 3.95 | 0.00 | 5.67 | 0.00 | 44.77 |
| 10 | ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ | 0.00 | 8.83 | 0.00 | 1.85 | 0.00 | 1.26 | 0.00 | 11.94 |
| **ನಿವೇಶನ ಒಟ್ಟು** | | **0.00** | **50.87** | **0.00** | **12.06** | **0.00** | **10.28** | **0.00** | **73.21** |
| **ವಸತಿ ಮತ್ತು ನಿವೇಶನ ಒಟ್ಟು** | | **5194.07** | **5351.81** | **2572.10** | **2404.06** | **2595.23** | **2056.37** | **10361.40** | **9812.24** |